ಜಿಲ್ಲೆಯಲ್ಲಿ ವಿಶೇಷವಾಗಿ ಏನಾಗಿದೆಯೆಂದರೆ, ಒಂದು ಹಾರ್ಸ್ ಪವರ್‌ಗೆ 300 ರೂಪಾಯಿ ವಸೂಲಿ ಮಾಡುವ ಬದಲಿಗೆ 500 ರೂಪಾಯಿಗಳಂತೆ ವಸೂಲು ಮಾಡುತ್ತಿದ್ದಾರೆ. 500 ರೂಪಾಯಿ ಕೊಡದೇ ಇದ್ದವರ ಪಂಪ್ ಹೌಸ್‌ಗಳಲ್ಲಿ ಫೀಸ್‌ನ್ನು ಕಿತ್ತು ಹಾಕಿ ಜಮೀನಿಗೆ ನೀರು ಹಾಯಿಸಲು ಸಾಧ್ಯವಿಲ್ಲದ ಹಾಗೆ ಮಾಡುತ್ತಿದ್ದಾರೆ. ಇದರಿಂದಾಗಿ ವಿಶೇಷವಾಗಿ ಅಡಿಕೆ ಬೆಳೆಗೆ ಬಹಳ ಹಾನಿಯಾಗಲು ಕಾರಣವಾಗಿದೆ. ಇದರ ಬಗ್ಗೆ ನಾವು ಜಿಲ್ಲಾ ಮಂತ್ರಿಯವರಲ್ಲಿ ಮಾತನಾಡಿದಾಗ, 300 ರೂಪಾಯಿಗಳನ್ನು ಮಾತ್ರ ವಸೂಲಿ ಮಾಡಬೇಕೆಂದು ಆದೇಶ ಕೊಟ್ಟಿದ್ದೇನೆಂದು ತಿಳಿಸಿದ್ದರು. ಆದರೆ, ಇಲಾಖೆ ಅಧಿಕಾರಿಗಳು 500 ರೂಪಾಯಿಗಳನ್ನು ವಸೂಲಿ ಮಾಡುತ್ತಿದ್ದಾರೆ.

ಶ್ರೀ ಶರಣಬಸಪ್ಪ ದರ್ಶನಾಪುರ್ (ಇಂಧನ ರಾಜ್ಯ ಸಚಿವರು): ನಮ್ಮ ಇಲಾಖೆಯಿಂದ 500 ರೂಪಾಯಿ ಕಲೆಕ್ಟ್ ಮಾಡುತ್ತಿಲ್ಲ, ಬರೀ 300 ರೂಪಾಯಿಗಳನ್ನು ಮಾತ್ರ ಕಲೆಕ್ಟ್ ಮಾಡಲಾಗುತ್ತಿದೆ.

ಶ್ರೀ ಡಿ.ವಿ.ಸದಾನಂದಗೌಡ: ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 500 ರೂಪಾಯಿಗಳನ್ನು ಕಲೆಕ್ಟ್ ಮಾಡುತ್ತಿದ್ದಾರೆ.

ಅಧ್ಯಕ್ಷರು: ಮಾನ್ಯ ಸದಸ್ಯರು ಊರಿನಿಂದ ಬಂದು ಅಲ್ಲಿರತಕ್ಕಂಥ ವಾಸ್ತವಾಂಶವನ್ನು ತಿಳಿಸಿದ್ದಾರೆ. ತಮ್ಮ ಅಧಿಕಾರಿಗಳ ಮುಖಾಂತರ ಅಲ್ಲಿ ಆ್ಯಕ್ಚುಯಲ್ ಪೊಸಿಷನ್ ಏನಿದೆಯೆಂದು ತಿಳಿದುಕೊಂಡು ನಾಳೆ ದಿವಸ ಹೇಳಿ. ಇದೇ ಕೆ.ಇ.ಬಿ.ಗೆ ಸಂಬಂಧಪಟ್ಟಂತೆ ನಾಳೆ ದಿವಸ ನಿಯಮ 69ರ ಮೂಲಕ ಡಿಸ್ಕಷನ್‌ಗೂ ಬರುತ್ತಿದೆ.

(ಊ) ಗುಲ್ಬರ್ಗ ಮತ್ತು ಬೀದರ್ ಜಿಲ್ಲೆಗಳಲ್ಲಿ ತೊಗರಿಬೆಳೆಗೆ ಹಾನಿ

ಶ್ರೀ ವೈಜನಾಥ್ ಪಾಟೀಲ್: ಮಾನ್ಯ ಅಧ್ಯಕ್ಷರೆ, ಗುಲ್ಬರ್ಗಾ ಮತ್ತು ಬೀದರ್ ಜಿಲ್ಲೆಯಲ್ಲಿ 1993ನೇ ಇಸವಿಯಲ್ಲಿ ಸಹ ತೊಗರಿ ಬೆಳೆಗೆ ಇವತ್ತಿನ ಪರಿಸ್ಥಿತಿಯೇ ಉಂಟಾಗಿತ್ತು. ಆ ಸಂದರ್ಭದಲ್ಲಿ ತೊಗರಿ ಬೆಳೆ ಬೆಳೆಯತಕ್ಕಂಥ ರೈತರುಗಳು ಒಂದು ಸಮ್ಮೇಳನವನ್ನು ಮಾಡಿ ಸರ್ಕಾರಕ್ಕೆ ರೆಪ್ರೆಸೆಂಟೇಷನ್ ಮಾಡಲಾಗಿತ್ತು. ಅದರಂತೆ ಆಗ ಸುಮಾರು ಹತ್ತು, ಹನ್ನೆರಡು ಕೋಟಿ ರೂಪಾಯಿಗಳನ್ನು ರಿಲೀಫ್ ಎಂದು ಸರ್ಕಾರ ಕೊಟ್ಟಿತ್ತು ಈ ಸಾರಿಯೂ ತೊಗರಿ ಬೆಳೆ ಬೆಳೆಯತಕ್ಕಂಥ ರೈತರುಗಳಿಗೆ ಅಪಾರ ಹಾನಿಯಾಗಿದೆ. ಮಾನ್ಯ ಮುಖ್ಯ ಮಂತ್ರಿಯವರು ಬೀದರ್‌ನಲ್ಲಿ ಬಂದಿದ್ದಾಗ ಒಂದು ಹೇಳಿಕೆಯನ್ನು ಕೊಟ್ಟು, ಕೇಂದ್ರ ಸರ್ಕಾರ 25 ಕೋಟಿ ರೂಪಾಯಿಗಳನ್ನು ಕೊಟ್ಟಿದೆ. ಆದರೆ, ಅದನ್ನು ಈ ಚುನಾವಣೆ ಸಂದರ್ಭದಲ್ಲಿ ಬಿಡುಗಡೆ ಮಾಡುವ ಹಾಗೆ ಇಲ್ಲ ಎಂದು ಹೇಳಿದ್ದರು. ಆದರೆ, ಅದೇ ಸಂದರ್ಭದಲ್ಲಿ ಆಂಧ್ರಪ್ರದೇಶ ಸರ್ಕಾರದವರು ತೊಗರಿ ಬೆಳೆಯನ್ನು ಹಾಳು ಮಾಡಿಕೊಂಡಿದ್ದ ರೈತರುಗಳಿಗೆ ಒಂದು ಎಕರೆಗೆ 400 ರೂಪಾಯಿಗಳಂತೆ ಪರಿಹಾರವನ್ನು ಕೊಟ್ಟಿದ್ದರು. ದೊಡ್ಡದಾಗಿ ಲಾಸ್ ಆದಾಗ ಸರ್ಕಾರ

ಪರಿಹಾರವನ್ನು ಕೊಡಲೇಬೇಕಾಗುತ್ತದೆ. ಎಕ್ಸ್‌ಗ್ರೇಷಿಯಾ ಸಿಚ್ಯುಯೇಷನ್ ಕ್ರಿಯೇಟ್ ಆದಾಗ ಸರ್ಕಾರ ಸಹಾಯ ಮಾಡಲೇಬೇಕಾಗುತ್ತದೆ. ಅಂಥಾ ಪರಿಸ್ಥಿತಿ ಇವತ್ತು ಬೀದರ್ ಮತ್ತು ಗುಲ್ಬರ್ಗಾದಲ್ಲಿ ಆಗಿದೆ. ಆದುದರಿಂದ ತೊಗರಿ ಬೆಳೆಗಾರರಿಗೆ ಆಗಿರತಕ್ಕಂಥ ನಷ್ಟವನ್ನು ತುಂಬಿಕೊಡಬೇಕೆಂದು ನಾನು ಸರ್ಕಾರದಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಕೆ.ಎನ್.ನಾಗೇಗೌಡ (ಭಾರಿ ನೀರಾವರಿ ಸಚಿವರು): ಮಾನ್ಯ ಅಧ್ಯಕ್ಷರೆ, ನಾನು ಇದರ ಬಗ್ಗೆ ಅಗ್ರಿಕಲ್ಚರಲ್ ಮಿನಿಸ್ಟರ್ ಜೊತೆ ಮಾತನಾಡಿ, ನಾಳೆ ದಿವಸ ಸದನದಲ್ಲಿ ಉತ್ತರ ಕೊಡಲಾಗುತ್ತದೆ.

12.40 ಪಿ.ಎಂ

MR. SPEAKER: Mr. P.G.R.Sindhia is in-charge of Mines and Geology portfolio. He has got some business in the Legislative council. He has sent the information. ಅವರು ಬರಲಿಕ್ಕೆ ಸ್ವಲ್ಪ ಸಮಯ ಆಗಬಹುದು.

ಶ್ರೀ ಎಂ.ಪಿ.ಪ್ರಕಾಶ್ (ಗ್ರಾಮೀಣಾಬಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು): ಮಾನ್ಯ ಸಂಬಂಧಪಟ್ಟ ಸಚಿವರು ವಿಧಾನಪರಿಷತ್‌ನಲ್ಲಿನ ಎರಡು ಪ್ರಶ್ನೆಗಳಿಗೆ ಉತ್ತರಿಸಬೇಕಾಗಿದ್ದು ಅದಾದ ಮೇಲೆ ಇಲ್ಲಿಗೆ ಬರುತ್ತಾರೆ. ಆದುದರಿಂದ ಗಮನಸೆಳೆಯುವ ಸೂಚನೆಯನ್ನು ಅವರು ಬಂದ ಮೇಲೆ ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು: ಈಗ ಚುನಾವಣಾ ಪ್ರಸ್ತಾವನ್ನು ಮೂವ್ ಮಾಡೋಣ. ಅವರು ಬಂದ ತತ್‌ಕ್ಷಣ ಗಮನಸೆಳೆಯುವ ಸೂಚನೆಯನ್ನು ತೆಗೆದುಕೊಳ್ಳೋಣ.

(3) ಚುನಾವಣಾ ಪ್ರಸ್ತಾವ

ಶ್ರೀ ಎಂ.ಪಿ.ಪ್ರಕಾಶ್ (ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು): ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳು ಮತ್ತು ಪ್ರವಾಸೋದ್ಯಮ ಇಲಾಖಾ ಮಂತ್ರಿಗಳ ಪರವಾಗಿ ಈ ಪ್ರಸ್ತಾವ ಮಂಡಿಸಲು ಅನುಮತಿ ಕೋರುತ್ತೇನೆ.

ಸನ್ಮಾನ್ಯ ಸಭಾಧ್ಯಕ್ಷರೆ,

"1992ನೇ ಇಸವಿಯ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯಗಳ ಅಧಿನಿಯಮ 18(8) ಕಲಮಿನ ಮೇರೆಗೆ ಅವಶ್ಯಪಡಿಸಿರುವಂತೆ ಏಕಲ ಸಂಕ್ರಮಣೀಯ ಮತದ ಮೂಲಕ ಅನುಪಾತ ಪ್ರಾತಿನಿಧ್ಯದ ನೀತಿಗೆ ಅನುಸಾರವಾಗಿ ಈ ಸಭೆಯು ಕರ್ನಾಟಕ